INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,92-99
Peer Reviewed Journal, Referred Journal

# ತಳಸಮುದಾಯದವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೀಡಿರುವ ಕೊಡುಗೆಗಳು: ಒಂದು ಪರಿಚಯ

**ಯತಿರಾಜ್.ಡಿ.ಎಂ.**[1]

ನಾಲ್ವಡಿ ಕೃಷ್ಣರಾಜ ಒಡೆಯರು ಅವರು 1884 ಜುಲೈ 4 ರಿಂದ 1940 ಆಗಸ್ಟ್ 2ರವರೆಗೆ ಬದುಕಿದ್ದವರು. ಭಾರತದಲ್ಲಿ ದೀನದಲಿತರ ಉದ್ದಾರಕ್ಕಾಗಿ ಪ್ರಪ್ರಥಮವಾಗಿ ಶ್ರಮಿಸಿದ ಹಾಗೂ ದಲಿತರಿಗೆ ಸಾಮಾಜಿಕವಾಗಿ ಸಿಗಬೇಕಾದ ನ್ಯಾಯದ ಕಡೆಗೆ ಗಮನ ಹರಿಸಿದ ರಾಜರೆಂದರೆ; ಕೊಲ್ಲಾಪುರ ಛತಪತಿ ಸಾಹುಮಹಾರಾಜರು. ಇವರ ಗೆಳೆತನ ಹಾಗೂ ಇವರು ಕೈಗೊಂಡಿರುವ ಕೆಲಸ ಕಾರ್ಯಗಳಿಂದ ಪ್ರೇರಿತರಾದವರು ಮೈಸೂರಿನ ನಾಲ್ವಡಿ ಅವರು. ಇದಕ್ಕೆ ಕಾರಣವೆಂದರೆ; ಇವರೂ ಸಹ ಶೂದ್ರವರ್ಗಕ್ಕೆ ಸೇರಿದವರಾಗಿದ್ದುದು. ನಾಲ್ವಡಿ ಅವರು ಕೈಗೊಂಡಂತಹ ಸಾಮಾಜಿಕ ಪ್ರಗತಿಯ ಕೆಲಸ ಕಾರ್ಯಗಳನ್ನು ತಮ್ಮ ಸಂಸ್ಥಾನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿ ತಮ್ಮ ಆಳ್ವಿಕೆಯ ಕೊನೆಯ ವೇಳೆಗೆ ಕೊಲ್ಲಾಪುರವೇ ಸಂಸ್ಥಾನವೇ ಮೈಸೂರಿನತ್ತ ನೋಡುವಂತೆ ಮಾಡಿದರು ಎನ್ನುವುದು ಸಂಸ್ಥಾನದಲ್ಲಿ ನಾಲ್ವಡಿ ಅವರು ತೋರಿದ ಸಾಮಾಜಿಕ ಪ್ರಗತಿಯ ವೇಗವನ್ನು ಸೂಚಿಸುತ್ತದೆ.

ಆಡಳಿತವು ಸಂಪೂರ್ಣತೆಯನ್ನು ಹೊಂದುವುದು ದಬ್ಬಾಳಿಕೆಯಿಂದಲ್ಲ. ದೀನ, ದಲಿತರ, ದುರ್ಬಲ, ಬಲಿಷ್ಠರೆಲ್ಲರನ್ನೂ ಸಮಾನವಾಗಿ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಭಿವೃದ್ಧಿಗೊಳಿಸಿದಾಗ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಎಲ್ಲಾ ವರ್ಗದ ಜನರಿಗೆ ಸಮಾಜ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಿದಾಗ ಮಾತ್ರವೇ ಇಂತಹ ಸಂಪೂರ್ಣ ಅಧಿಕಾರ ಅಥವಾ ಆಡಳಿತವನ್ನು ಕರ್ನಾಟಕದ ಹೆಮ್ಮೆಯ ಸಾಂಸ್ಕೃತಿಕ ಸಂಸ್ಥಾನ ಮೈಸೂರು ಅರಸರಲ್ಲಿ ಹೆಚ್ಚಿನ ರೀತಿಯಲ್ಲಿ ಗುರುತಿಸಬಹುದು. ಅದರಲ್ಲೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಅವಧಿಯಲ್ಲಿ ಸಾಕಷ್ಟು ಸಾಮಾಜಿಕ ಬದಲಾವಣೆಗಳು ಉತ್ತಮ ರೀತಿಯಲ್ಲಿ ಜರುಗಿದೆ. ಭಾರತೀಯ ಸಮಾಜದಲ್ಲಿ ಪೂರ್ವದಿಂದಲೂ ಸಾಮಾಜಿಕ ಮೌಢ್ಯಗಳು ಹೆಚ್ಚಿನ ಆಚರಣೆಯಲ್ಲಿವೆ. ಭಾರತದಲ್ಲೂ ಕೂಡ ಉಳ್ಳವರು ಇಲ್ಲದವರ ಮೇಲೆ ನಡೆಸಿರುವ ದಬ್ಬಾಳಿಕೆಯ ಘೋರಕೃತ್ಯವನ್ನು ಗುರುತಿಸಿಕೊಳ್ಳಬಹುದು. ಪ್ರಪಂಚದ ವಿವಿಧ ದೇಶಗಳಲ್ಲಿ ವರ್ಣಭೇದ, ಧರ್ಮಭೇದ, ಜನಾಂಗೀಯ ಭೇದ, ಸಿರಿವಂತಿಕೆಯ ಭೇದದಲ್ಲಿ ಉಂಟಾಗಿರುವ ಹಲವು ದೌರ್ಜನ್ಯಗಳಿಗೆ ದಾಖಲೆಗಳಿವೆ. ಹಾಗೆಯೇ ಭಾರತದಲ್ಲಿ ಸ್ವಲ್ಪ ವಿಶಿಷ್ಟವಾಗಿ ಜಾತಿಭೇದ, ವರ್ಗತಾರತಮ್ಯ,

---

1. **ಸಂಶೋಧಕರು**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಮನುಸಿದ್ಧಾಂತ ವರ್ಣನೀತಿ, ಬಾಲ್ಯವಿವಾಹ, ಸತಿಸಹಗಮನ, ದೇವದಾಸಿ ಇನ್ನೂ ಅನೇಕ ಮೌಢ್ಯಗಳಲ್ಲಿ ಸಮಾಜವು ನಲುಗುತ್ತಿತ್ತು. ಬ್ರಾಹ್ಮಣೇತರರೆಲ್ಲರೂ ಶೂದ್ರರೇ ಆಗಿರುವುದರಿಂದ ಲಿಂಗಾಯಿತ, ಒಕ್ಕಲಿಗ, ಶೆಟ್ಟಿ, ಕುಂಬಾರ, ವಿಶ್ವಕರ್ಮ, ಇನ್ನೂ ಹಲವು ಹತ್ತು ಜಾತಿ ಸಮುದಾಯಗಳು ಕೂಡ ಹಿಂದಿನ ಕಾಲದಲ್ಲಿ ಹಲವಾರು ಕೆಟ್ಟ ಸಂಪ್ರದಾಯಗಳಲ್ಲಿ ನಲುಗಿದ್ದರು. ಇನ್ನೂ ಕೆಳ ಮಟ್ಟದ ಸ್ಥಿತಿಯಲ್ಲಿದ್ದ ಮಾದಿಗ, ಹೊಲೆಯ, ಅಜಾಮ, ಕೊರಗ, ಮತ್ತಿತ್ತರ ಜಾತಿಯವರಿಗೆ ಕಠಿಣವಾದ ಪರಿಸ್ಥಿತಿ ಸಮಾಜದಲ್ಲಿ ರೂಪುಗೊಂಡಿತ್ತು. ಮೇಲ್ವರ್ಗದವರು ತಳಸಮುದಾಯದವರೆಲ್ಲರನ್ನು ಅಸ್ಪೃಶ್ಯತೆಯ ಆಚರಣೆಯಲ್ಲಿ ಧಮನಗೊಳಸಿದ್ದರು.

ಇವರ ಆದರ್ಶಗಳ ಅನ್ವಯವಾಗಿ ವ್ಯಕ್ತಿತ್ವ ರೂಢಿಸಿಕೊಂಡಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೀನ ದಲಿತರನ್ನು ಅವರ ಆಡಳಿತ ಅವಧಿಯಲ್ಲಿ ಸಮಾಜದ ಮುಖ್ಯವಾಹಿನಿಗೆ ತಂದರು. ಸಮಾನತೆಯೊಂದೇ ಸಮಾಜದ ಉದ್ಧಾರ ಎಂದು ಇಡೀ ನಾಡಿಗೇ ಸಾರಿದರು. ನುಡಿದಂತೆ ನಡೆಯುವ ಜ್ಞಾನಿಯಾಗಿದ್ದ ನಾಲ್ವಡಿ ಅವರು ತಳಸಮುದಾಯದವರನ್ನು ಅಪ್ಪಿಕೊಂಡರು. ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದ ಸಮಯದಲ್ಲಿ ಪ್ರಾಂತ್ಯದೆಲ್ಲೆಡೆ ಅಸ್ಪೃಶ್ಯತೆಯ ಆಚರಣೆಯು ತಾಂಡವವಾಡುತ್ತಿತ್ತು. ವಿವೇಕಾನಂದರು ಇದನ್ನು ಗಮನಿಸಿದ್ದರು. ಮರಳ ಹೊರಟಂತಹ ಸಂದರ್ಭದಲ್ಲಿ ಮಹಾರಾಜರಿಗೆ ಪತ್ರಗಳ ಮೂಲಕ ಅಸ್ಪೃಶ್ಯ ವರ್ಗದ ಉದ್ದಾರಕ್ಕಾಗಿ ಕ್ರಮಕೈಗೊಳ್ಳಬೇಕೆಂದು ಹೇಳಿದ ಹಿತವಚನಗಳ ಫಲವಾಗಿ ಹಾಗೂ ***"ಶಿಕ್ಷಣವು ಎಲ್ಲಾ ಪ್ರಗತಿಯ ಮೂಲ, ಎಲ್ಲಾ ಆರ್ಥಿಕ ಮುಗ್ಗಟ್ಟಿಗೂ ಶಿಕ್ಷಣವೊಂದೇ ಮದ್ದು, ಬಡತನದ ತೀವ್ರತೆ, ಅಜ್ಞಾನ ಮತ್ತು ಅಪೌಷ್ಠಿಕತೆಗಳನ್ನು ಹೋಗಲಾಡಿಸಿ ಸ್ವಾಸ್ಥ್ಯ ಸದೃಢ ಸಮಾಜವನ್ನು ನಿರ್ಮಿಸಲು ಶಿಕ್ಷಣವೇ ಪ್ರಮುಖ ಸಾಧನ"*** ಎಂದು ತಮ್ಮ ಭಾಷಣದಲ್ಲಿ ಪ್ರತಿಪಾದಿಸುತ್ತಾ ಬಂದವರು ನಾಲ್ವಡಿ ಅವರು.

ನಾಲ್ವಡಿ ಅವರು ನೀಡಿರುವಂತಹ ಕೊಡುಗೆಗಳೆಂದರೆ; ಬ್ರಾಹ್ಮಣೇತರರು, ಮಹಿಳೆಯರು, ಮತ್ತು ಅಸ್ಪೃಶ್ಯರಂತಹವರಿಗೆ ಶಿಕ್ಷಣ ಅಗತ್ಯವಾಗಿರುವುದನ್ನು ಅರಿತು ಶಿಕ್ಷಣವನ್ನು ಸಾರ್ವತ್ರೀಕರಣಗೊಳಸಿದರು. ಜಾತಿ–ಜನಾಂಗ, ಉತ್ತಮ–ಅಧಮ ಎಂಬ ಭೇದಭಾವವಿಲ್ಲದೆ ಸರ್ವರಿಗೂ ಶೈಕ್ಷಣಿಕ ಸಂಸ್ಥೆಗಳ ಬಾಗಿಲನ್ನು ತೆರೆದವರೆಂದರೆ, ಅದುವೇ ಕ್ರೈಸ್ತ ಮಿಷನರಿಗಳು. ಇವರು ಆರಂಭಿಸಿದ ಪಂಚಮರ ಶಿಕ್ಷಣವನ್ನು ಮೈಸೂರು ಸರ್ಕಾರವೂ ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಯಿತು. 1890ರಲ್ಲಿ ಆನೆಕಲ್ ತಾಲ್ಲೂಕಿನ ಹಸ್ಕೂರು, ಮಾಲೂರು ತಾಲ್ಲೂಕಿನ ನರಸೀಪುರ ಎರಡೂ ಕಡೆ ಪಂಚಮರಿಗೆ ಸರ್ಕಾರಿ ಶಾಲೆಗಳನ್ನು ತೆರೆಯಿತು. ಸರ್ಕಾರವು ದೇಶೀಯ ಶಾಲೆಗಳಗೂ ಅನುದಾನ ನೀಡುವ ಯೋಜನೆ ಜಾರಿಗೊಳಸಿದ್ದು, ಅದೇ ನಿಯಮಗಳು ಹೊಲೆಯ, ಮಾದಿಗ, ಲಂಬಾಣಿ, ಕೊರಚ, ಕೊರಮ ಮತ್ತು ನಾಯಿಂದರು ಖಾಸಗಿಯಾಗಿ ಆರಂಭಿಸಿದ ಪಂಚಮ ಶಾಲೆಗಳಗೂ ಅನ್ವಯವೆಂದು ಆದೇಶ ಹೊರಡಿಸಿತು. ಪಂಚಮ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ

ಕಡಿಮೆ ಇತ್ತು. ಆದರೂ ಶಾಲೆಗಳಿಗೆ ಅನುದಾನ ಕೊಡಲಾಗಿ 1890–1891ರಲ್ಲಿ 5 ಇದ್ದ ಪಂಚಮ ಶಾಲೆಗಳ ಸಂಖ್ಯೆ 1899–1900ರ ಸಮಯಕ್ಕೆ 27ಕ್ಕೇರಿತು. ಪಂಚಮ ಶಾಲೆಯ ವಿದ್ಯಾರ್ಥಿಗಳಿಗೆ ಸ್ಲೇಟ್, ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿತ್ತು. ವಿದ್ಯಾಭ್ಯಾಸದಲ್ಲಿ ಉತ್ತಮ ಸ್ಥಾನ ತಲುಪಿದ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ನೀಡಲಾಗುತ್ತಿತ್ತು. ನಾಲ್ವಡಿ ಅವರು ಅಧಿಕಾರಕ್ಕೆ ಬಂದ ವರ್ಷವೇ ಅಂದರೆ; 1901–02ರಲ್ಲಿ ಪೋಲಿಸರ ಸಹಕಾರದೊಂದಿಗೆ ಲಂಬಾಣಿಗಳಿಗೆ 11 ಶಾಲೆಗಳನ್ನು ತೆರೆಯಲಾಯಿತು. ಅವುಗಳಲ್ಲಿ 7 ಶಿವಮೊಗ್ಗ, 2 ತುಮಕೂರು ಮತ್ತು ಹಾಸನ ಹಾಗೂ ಚಿತ್ರದುರ್ಗಗಳಲ್ಲಿ ಒಂದೊಂದರಂತೆ ಸ್ಥಾಪಿಸಲಾಗಿತ್ತು. ಪಂಚಮ ವಿದ್ಯಾರ್ಥಿಗಳಿಗೆ ಆಂಗ್ಲಭಾಷೆ ಕಲಿಯಲು 1906–07 ರಿಂದ ವಿದ್ಯಾರ್ಥಿವೇತನಗಳನ್ನು ನೀಡಲಾರಂಭಿಸಿತು. ಈ ಸಮಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಬ್ರಾಹ್ಮಣರು ಬೋಧಿಸಲು ಮತ್ತು ತಪಾಸಣಾ ಅಧಿಕಾರಿಯಾಗಿ ಬರಲು ಒಪ್ಪದಿದ್ದಾಗ ಮುಸ್ಲಿಂ ಶಿಕ್ಷಕರು ಮತ್ತು ನೇಟಿವ್ ಕ್ರಿಶ್ಚಿಯನ್ನರು ಪಂಚಮ ಶಾಲೆಗಳಿಗೆ ಶಿಕ್ಷಕರಾಗಿ ಬರಲು ನಾಲ್ವಡಿ ಅವರ ಮಾತಿನ ಮೇರೆಗೆ ಒಪ್ಪಿದರು. ಶಾಲೆಯೊಂದನ್ನು ಮೈಸೂರಿನಲ್ಲಿ ಸ್ಥಾಪಿಸಿತು. ಜೊತೆಗೆ ವಿದ್ಯಾರ್ಥಿಗಳಲ್ಲಿ ಸ್ವಾವಲಂಬನೆ ವ್ಯಕ್ತಿತ್ವ ನಿರ್ಮಾಣ ಮಾಡಲು ಕೈಗಾರಿಕಾ ತರಬೇತಿ ಚಾಪೆಹೆಣೆಯುವ, ಪ್ರಾತ್ಯಕ್ಷಿಕಕೃಷಿ, ಬಡಗಿ, ಕಮ್ಮಾರಿಕೆ ಮುಂತಾದವುಗಳನ್ನು ಕಲಿಸಲಾಗುತ್ತಿತ್ತು. ಊಟ ಮತ್ತು ವಸತಿ ಸೌಲಭ್ಯಕ್ಕಾಗಿ ಸರ್ಕಾರವು 4000 ರೂಪಾಯಿಗಳನ್ನು ವಾರ್ಷಿಕವಾಗಿ ನೀಡುತ್ತಿತ್ತು. ವಸತಿ ನಿಲಯಗಳಿಗೆ ಬೇಡಿಕೆ ಹೆಚ್ಚಿದಂತೆ 1918ರಲ್ಲಿ ಚಿಕ್ಕಮಗಳೂರು ಹಾಗೂ ತುಮಕೂರುಗಳಲ್ಲಿ ಬೋರ್ಡಿಂಗ್ ಶಾಲೆಗಳನ್ನು ಸ್ಥಾಪಿಸಲಾಯಿತು.

1917 ರಿಂದ ಪಂಚಮರ ಶಿಕ್ಷಣಕ್ಕಾಗಿ ಸರ್ಕಾರವು ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತು. ಅಂತಿಮವಾಗಿ ಎಲ್ಲಾ ಸರ್ಕಾರಿ ಮತ್ತು ಅನುದಾನ ಪಡೆಯುವ ಶಾಲೆಗಳಲ್ಲಿ ಪಂಚಮರಿಗೆ ಪ್ರವೇಶಾವಕಾಶ ಕೊಡಲು 1918ರ ನವೆಂಬರ್ 23ರಲ್ಲಿ ಒಂದು ಕಾನೂನನ್ನು ಜಾರಿಗೆ ತಂದಿತು. "ಜಾತಿಯನ್ನಾಧರಿಸಿ ಯಾರನ್ನೂ ಸರ್ಕಾರಿ ನೇತೃತ್ವದಲ್ಲಿ ನಡೆಯುವ ಶಾಲೆಗಳಿಂದ ಹೊರಗಿಡುವುದಿಲ್ಲವೆಂದು" ತಿಳಿಸಿತು. ಈ ಶಾಸನವನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ವಿರೋಧಿಸಿದರು. "ಅಸ್ಪೃಶ್ಯರನ್ನು ಕೀಳು ಮಟ್ಟದ ಹೊಲಸು ಜನ ಮತ್ತು ಪ್ರಾಣಿ ಸಮಾನರು" ಎಂದು ಕರೆದು ಸಾರ್ವಜನಿಕ ಶಾಲೆಗಳಲ್ಲಿ ಉನ್ನತ ಜಾತಿಯ ಮಕ್ಕಳೊಟ್ಟಿಗೆ ಶಿಕ್ಷಣ ಹೊಂದಲು ಕಾನೂನು ತರಬಾರದೆಂದು ಒತ್ತಾಯಿಸಿದರು. ಪಂಚಮರು ಸೇರಿದ ಶಾಲೆಗಳನ್ನು ಮುಚ್ಚುತ್ತೇವೆಂದು ಬೆದರಿಸಿದರು. ಆದರೂ ರೋಷಾವೇಷದಿಂದ ಕೂಡಿದ ವಿರೋಧದ ನಡುವೆಯೂ ನಾಲ್ವಡಿ ಅವರು ಬಂಡೆಯಂತೆ ಸ್ಥಿರವಾಗಿ ನಿಂತರು. ನಾಲ್ವಡಿ ಅವರು ಸ್ವತಃ ತಾವೇ ಪಂಚಮ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಮಕ್ಕಳೊಂದಿಗೆ ಬೆರೆತು ಕುಂದುಕೊರತೆಗಳನ್ನು ತಿಳಿದು ಪರಿಹರಿಸಿ ಬರುತ್ತಿದ್ದರು. ಪಂಚಮ ಮಕ್ಕಳಿಗೆ ತನ್ನ ತಂದೆಯ ಸ್ಥಾನದ ಕರ್ತವ್ಯವನ್ನು ಹಿಂಜರಿಯದೆ ನಿರ್ವಹಿಸಿದರು. ನಾಲ್ವಡಿ ಅವರ ಬೆಂಬಲದಿಂದಾಗಿ 1919–20ರಲ್ಲಿ

ಸುಮಾರು 3144 ಪಂಚಮ ವಿದ್ಯಾರ್ಥಿಗಳು ಸಾರ್ವಜನಿಕ ಶಾಲೆಗಳಿಗೆ ದಾಖಲಾತಿ ಪಡೆದರು. ನಾಲ್ವಡಿ ಅವರ ವಿಶೇಷ ಕಾಳಜಿ ಎಂದರೆ; ಪಂಚಮ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸುವಂತೆ ಪ್ರೋತ್ಸಾಹ ನೀಡಲು ವಿದ್ಯಾರ್ಥಿಗಳ ಪೋಷಕರಿಗೆ ಭತ್ಯೆ ನೀಡುವ ವಿಶೇಷ ಕ್ರಮ ಕೈಗೊಳ್ಳಲಾಯಿತು. ಇದಕ್ಕೆ ಸಂಬಂಧಿಸಿದಂತೆ ನಾಲ್ವಡಿ ಅವರ ಸಾಮಾಜಿಕ ವಲಯದ ವಿಶೇಷ ಕಾಳಜಿಯನ್ನು ಗುರುತಿಸಿ ಮಿಲ್ಲರ್ ಕಮಿಟಿಯೂ ಸಹ ಪಂಚಮ ಶಾಲೆಗಳಿಗೆ ಅಸ್ಪೃಶ್ಯ ಶಿಕ್ಷಕರನ್ನು ಹಾಗೂ ಪರಿವೀಕ್ಷಕರನ್ನು ನೇಮಿಸುವ ಮೂಲಕ ವಿಶೇಷ ಗಮನ ನೀಡಬೇಕೆಂದು ಸಲಹೆ ನೀಡಿತು. ನಾಲ್ವಡಿ ಅವರು ಸಮಾಜವನ್ನು ತಿದ್ದುವ ಮನೋಧರ್ಮದಲ್ಲಿ ಇದ್ದುದಾಗಿ, ಹಿಂದಿನ ಮಡಿ ಮೈಲಿಗೆ ಸಂಕೋಲೆಗಳನ್ನು ಮುರಿಯುವ ಶ್ರೇಷ್ಠ ಚಿಂತನೆಯಿಂದ ಪ್ರತ್ಯೇಕ ಪಂಚಮ ಶಾಲೆಗಳನ್ನು ತೆಗೆಯುವುದರ ಬದಲು ಸಾಮಾನ್ಯ ಶಾಲೆಗಳಲ್ಲೇ ಅಸ್ಪೃಶ್ಯರಿಗೆ ಅವಕಾಶ ಮಾಡಿಕೊಡಬಹುದಲ್ಲ ಎಂದು ಸಾಮಾನ್ಯ ಶಾಲೆಗಳಲ್ಲಿ ಪಂಚಮ ಶಾಲೆಗಳನ್ನು ಸೇರ್ಪಡೆಗೊಳಿಸಿದರು. ಇದರಿಂದ ಪಂಚಮ ವಿದ್ಯಾರ್ಥಿಗಳು ಪಂಚಮ ಶಾಲೆಗಳಿಗಿಂತ ಹೆಚ್ಚಿನದಾಗಿಯೇ ಸಾಮಾನ್ಯ ಶಾಲೆಗಳಿಗೆ ಸೇರಿದರು. ಸಾಮಾನ್ಯ ಶಾಲೆಗಳಲ್ಲಿ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳ ಸಂಖ್ಯೆ 1923-33ರಲ್ಲಿ 6,315ರಷ್ಟಿದ್ದುದು 1939-40ರ ವೇಳೆಗೆ 12,704ರಷ್ಟಾಯಿತು. ಪಂಚಮ ವಿದ್ಯಾರ್ಥಿಗಳು ಸಾಮಾನ್ಯ ಶಾಲೆಗಳಿಗೆ ಹೆಚ್ಚಿಗೆ ಸೇರಲು ಕಾರಣ ಏನೆಂದರೆ, ಸಾಮಾನ್ಯ ಶಾಲೆಗಳಲ್ಲಿ ಶಾಲಾ ವ್ಯವಸ್ಥೆಯ ಗುಣಮಟ್ಟ ಪಂಚಮ ಶಾಲೆಗಳಿಗಿಂತ ಉತ್ತಮವಾಗಿತ್ತು. ಹಾಗೆಯೇ ಪಂಚಮರು ಸಾಮಾನ್ಯ ಶಾಲೆಗಳನ್ನು ಸೇರಲು ಮೇಲ್ಜಾತಿಯವರ ವಿರೋಧವೂ ನಾಲ್ವಡಿ ಅವರ ಪಂಚಮರ ಪರವಾದ ಶಾಸನಗಳು ಸಹಕಾರಿಯಾಗಿತ್ತು. ಜೊತೆಗೆ ಮೇಲ್ಜಾತಿಯ ವಿದ್ಯಾರ್ಥಿಗಳು ಪಂಚಮ ಶಾಲೆಗಳಲ್ಲಿ ಪ್ರವೇಶಾತಿಯನ್ನು ಪಡೆದಿದ್ದರು.

ಇದರಿಂದಾಗಿ ಮೈಸೂರು ಪ್ರಾಂತ್ಯದಲ್ಲಿ ಸವರ್ಣೀಯರ ಅಸ್ಪೃಶ್ಯತೆಯ ತೀವ್ರತೆ ತಗ್ಗಿತು. ನಾಲ್ವಡಿ ಅವರ ಸಾಮಾಜಿಕ ಶಾಸನಗಳಿಂದಾಗಿ 1918ರಲ್ಲಿ ಮೆಟ್ರಿಕ್ಯುಲೇಷನ್, 1925ರಲ್ಲಿ ಪದವಿಯನ್ನು ಮೊದಲ ಬಾರಿಗೆ ಪಂಚಮ ವಿದ್ಯಾರ್ಥಿಗಳು ಪಡೆದರು. ಜೊತೆಗೆ ಸರ್ಕಾರಿ ಸೇವೆಯಲ್ಲಿ ಯಾವುದೇ ಪ್ರಾತಿನಿಧ್ಯ ಪಡೆಯದಿದ್ದ ಪಂಚಮರು 1925ರ ವೇಳೆಗೆ ಶೇಕಡಾ 4.25ರಷ್ಟು ಗೆಜೆಟೆಡ್ ಮತ್ತು ಶೇಕಡಾ 6.95ರಷ್ಟು ನಾನ್ ಗೆಜೆಟೆಡ್ ಹುದ್ದೆಗಳನ್ನು ಹೊಂದುವಂತಾದರು. ಎಂ.ವಿ. ಸೀತಾರಾಮಯ್ಯ ಅವರು ಆಗಿನ ಸಾಮಾಜಿಕ ಬದಲಾವಣೆಯ ಕುರಿತಾಗಿ ತಮ್ಮ ಜೀವನ ನಾಟಕ ಕೃತಿಯಲ್ಲಿ ಹೀಗೆ ಬರೆದುಕೊಂಡಿದ್ದಾರೆ. “ರಾಮರಾಯರ ಪತ್ನಿ ‘ಹೊಲೆ ಮಾದಿಗರು, ಹಜಾಮರು ಇವರ ಮಕ್ಕಳಿಗೆಲ್ಲ ಪಾಠ ಹೇಳುವುದೇ? ಅವರ ಮೈಲಿಗೆಯೆಲ್ಲ ನಮಗೆ ಬೆರೆಯುವುದಿಲ್ಲವೇ? ಎಂದು ಪ್ರಶ್ನಿಸಿದಾಗ ರಾಮ್ಮರಾಯರು”, “ನೋಡು ವಿದ್ಯಾದಾನ ಮಾಡುವಾಗ ಆ ಜಾತಿ ಈ ಜಾತಿ ಅಂತ ನೋಡಬಾರದು. ವಿದ್ಯೆ ಜ್ಞಾನ ಅಂದರೆ ಬೆಳಕು..... ಅವರೆಲ್ಲ ಸ್ಕೂಲಿಗೂ ಬರುತ್ತಾರಲ್ಲ? ಅಲ್ಲಿ ಮೈಲಿಗೆ ಆಗುವುದಿಲ್ಲವೆ?” ಎಂದು ಉತ್ತರಿಸಿದರು. ಆ ಮೂಲಕ ಉದಾರವಾದಿಯಾಗಿ ತೋರಿದರೂ “ಪುಟ್ಟಯ್ಯನ ಮಗನನ್ನು

ಹಜಾರದ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ಕೂರಿಸುತ್ತೇನೆ" ಮಂಚಿಯ ಮಗನನ್ನು ಜಗಲಿಯ ಮೇಲೆ ಕೂರಿಸುತ್ತೇನೆ ಎನ್ನುವುದರ ಮೂಲಕ ಸಂಪ್ರದಾಯಿಕವಾದಿಯಾಗಿ ಕಾಣಿಸಿಕೊಳ್ಳುತ್ತಾರೆ. ಅಂದರೆ ಆ ವೇಳೆಗೆ ಅಸ್ಪೃಶ್ಯರನ್ನು ಮುಟ್ಟಿಸಿಕೊಳ್ಳದೇ ಇರುವ ಮೇಲ್ಜಾತಿಯವರು ಮನೆಪಾಠಕ್ಕೆ ಪಂಚಮರನ್ನು ಕರೆಸಿಕೊಂಡಿದ್ದು ಬಹುದೊಡ್ಡ ಬದಲಾವಣೆ ಎನ್ನಬಹುದು. ಹೀಗೆ ಶಿಕ್ಷಣದಿಂದ ವಂಚಿತರಾಗಿದ್ದ, ಕೃಷಿಯನ್ನೇ ತಮ್ಮ ಬೆನ್ನೆಲುಬಾಗಿಸಿಕೊಂಡಿದ್ದ ಶೂದ್ರ ವರ್ಗವೂ ಸಮಾಜದ ಮೇಲ್ವರ್ಗದ ಗುಂಪಿನ ಜೊತೆಯಲ್ಲಿ ಸರಿಸಮವಾಗಿ ಆಲೋಚಿಸುವ, ಚಿಂತಿಸುವ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಮಟ್ಟಕ್ಕೆ ಸಾಗಿತು. ಈ ರೀತಿಯ ಬದಲಾವಣೆಗೆ ನಾಲ್ವಡಿ ಅವರ ಕೊಡುಗೆ ಅಪಾರ. ನಾಲ್ವಡಿ ಅವರ ಸರ್ಕಾರವು ಅಸ್ಪೃಶ್ಯರ ಸಮಸ್ಯೆಯನ್ನು ಹಂತಹಂತವಾಗಿ ಹೋಗಲಾಡಿಸಲು ಮುಂದಾಯಿತು. 1933ರಲ್ಲಿ ಎಲ್ಲ ಸರ್ಕಾರಿ ಅಧಿಕಾರಿಗಳಿಗೂ ಆಜ್ಞೆಯೊಂದನ್ನು ಹೊರಡಿಸಿ ಅಸ್ಪೃಶ್ಯರಿಗೆ ಎಲ್ಲ ಕೆರೆಗಳನ್ನು ಬಳಸಿಕೊಳ್ಳುವ ಅವಕಾಶ ಮಾಡಿಕೊಡಬೇಕೆಂದು ನಿರ್ದೇಶನ ನೀಡಿತು. ಅದೇ ರೀತಿ ಬೆಂಗಳೂರು, ತುಮಕೂರು ಮತ್ತು ಕೋಲಾರದ ಜಿಲ್ಲಾ ಬೋರ್ಡ್‌ಗಳಿಗೂ ಸಹ ಅವುಗಳ ಹತೋಟಿಯಲ್ಲಿ ಕೆರೆ ಬಾವಿಗಳನ್ನು ಅಸ್ಪೃಶ್ಯರಿಗೆ ತೆರೆಯುವಂತೆ ತಿಳಿಸಿತು. ಸಂಡೂರು ಮತ್ತು ತಿರುವಾಂಕೂರು ಸಂಸ್ಥಾನಗಳಲ್ಲಿ ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಅನುಮತಿ ನೀಡಬೇಕೆಂದು ಶಾಸನ ಹೊರಡಿಸಿದ್ದನ್ನು ತಿಳಿದು, ಪ್ರಭಾವಿತರಾದ ನಾಲ್ವಡಿ ಅವರು 1926ರಲ್ಲಿ ಅರಮನೆಯ ದಸರಾ ದರ್ಬಾರಿಗೆ, ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ಪ್ರವೇಶಾವಕಾಶ ನೀಡಿದರು. ತಳಸಮುದಾಯದವರು ನಾಲ್ವಡಿ ಅವರಿಗೆ ಎಂದಿಗೂ ಋಣಿಯಾಗಿರುವಂತಹ ಸಾಮಾಜಿಕ ಕೆಲಸವನ್ನು ನಾಲ್ವಡಿ ಅವರು ಕೈಗೊಂಡರು.

ನಾಲ್ವಡಿ ಅವರು ಹಿಂದೂ ಸಮಾಜವು ಒಂದು ಅಸಮಾನತೆಯ ತವರು ಎಂಬುದನ್ನು ಬಹುಸೂಕ್ಷ್ಮವಾಗಿ ಅರಿತಿದ್ದರು. ಮಾನವತಾವಾದಿಯಾದ ಅವರು ಸಾಮಾಜಿಕ ಅಸಮಾನತೆ ಶೋಷಣೆಯ ವಿರುದ್ಧ ಸಿಡಿದೆದ್ದರು. ದಲಿತರಿಗೆ ಶಿಕ್ಷಣ ಕಲ್ಪಿಸಿ ಅವರಲ್ಲಿ ಕ್ರಾಂತಿಯ ಕಹಳೆ ಮೊಳಗುವಂತೆ ಮಾಡಲು ಮುಂದಾದರು. ಒಂದು ಅರ್ಥದಲ್ಲಿ ನಾಲ್ವಡಿ ಅವರು ಹೊಸ ಬಗೆಯ ಸಮಾಜ ಸಂಘಟನಾ ವಿಚಾರಗಳನ್ನು ಹೊಂದಿದ್ದ ಸೂಕ್ಷ್ಮ ಮನಸ್ಸಿನ ಧೀಮಂತರಾಜರಾಗಿದ್ದರು.

ದಲಿತರಿಗಾಗಿ ಮೊದಲು ಹೈಸ್ಕೂಲು ಹಾಗೂ ಎರಡು ಸರ್ಕಾರಿ ಶಾಲೆಗಳನ್ನು ನರಸಾಪುರದಲ್ಲಿ ಪ್ರಥಮವಾಗಿ ತೆರೆಯಲಾಯಿತು. ಅನಂತರ ಮೈಸೂರು ಆನೆಕಲ್ಲು ಹಾಗೂ ಹಾಸನಗಳಲ್ಲಿ ಅನುದಾನ ರಹಿತ ಶಾಲೆಗಳನ್ನು ಆರಂಭಿಸಲಾಯಿತು. ಸರ್ವಜನಿಕ ಶಾಲೆಗಳಲ್ಲಿ ದಲಿತರ ಮಕ್ಕಳು ಹೊರಗಿನ ವರಾಂಡದಲ್ಲಿ ಕುಳಿತು ಪಾಠ ಕಲಿಯಬೇಕಿತ್ತು. ಕಾರಣ ದೇಶದ ಸವರ್ಣೀಯರಲ್ಲಿ ಮಾಡುತ್ತಲಿದ್ದ ಜಾತಿ ನಿಷೇಧಗಳು. ಕಾಲಕ್ರಮೇಣ ನಾಲ್ವಡಿ ಅವರ ಸರ್ಕಾರ ದಲಿತರಿಗಾಗಿಯೇ ಹಲವಾರು ಶಾಲೆಗಳನ್ನು ಪ್ರಾರಂಭಿಸಿತು. 1914–15ರ ವರದಿಯಲ್ಲಿ ಶಿಕ್ಷಣಾಧಿಕಾರಿಯು ಸಮುದಾಯದ ಮೇಲ್ವರ್ಗದವರಲ್ಲಿ ದಲಿತರ ಬಗೆಗೆ ಇದ್ದ ಮನೋಭಾವನೆಗಳಲ್ಲಿ ಬದಲಾವಣೆಯಾಗಿದ್ದುದನ್ನು ಗುರುತಿಸಿದರು.

ನಾಲ್ವಡಿ ಅವರ ದಲಿತ ಪರ ಸರ್ಕಾರದಲ್ಲಿ ದಲಿತರಿಗೆ ಸಾಮಾನ್ಯ ವಿದ್ಯಾಭ್ಯಾಸ ಮಾತ್ರವಲ್ಲದೇ ವೃತ್ತಿಪರ ಶಿಕ್ಷಣ ಕೂಡ ನೀಡಲು ವ್ಯವಸ್ಥೆ ಮಾಡಲಾಗಿತ್ತು. ಅವರಿಗಾಗಿ ಮೈಸೂರು, ತುಮಕೂರು, ಚಿಕ್ಕಮಗಳೂರು ಹಾಗೂ ಬೆಂಗಳೂರು ಮುಂತಾದ ಕಡೆಗಳಲ್ಲಿ ವಸತಿ ಶಾಲೆಗಳನ್ನು ತೆರೆಯಲಾಯಿತು. 1918–19ರ ವೇಳೆಗೆ ಸಾರ್ವಜನಿಕ ಶಾಲೆಗಳಗೆ ಸೇರಲು ಅವರಿಗೆ ಅವಕಾಶ ಮಾಡಿಕೊಡಲಾಯಿತು. ಈ ಸಮಾಜಮುಖೀ ಕಾರ್ಯಗಳು ಸವರ್ಣೀಯರಿಗೆ ಇಷ್ಟವಾಗಲಿಲ್ಲ. ಅವರು ನಾಲ್ವಡಿ ಅವರ ವಿರುದ್ಧ ಹಾಗೂ ಗಾಂಧಿ ಅವರ ಕಾಂಗ್ರೆಸ್ ಪರವಾಗಿ ಕೆಲಸ ಮಾಡಲು ಆರಂಭಿಸಿದರು. ಈ ಧೋರಣೆಗೆ ಅನುಗುಣವಾಗಿ ದಲಿತರ ಮಕ್ಕಳಗೆ ವಿದ್ಯಾರ್ಥಿ ವೇತನಗಳನ್ನು ಉಚಿತ ಭೋಜನ, ವಸತಿ, ಸೌಕರ್ಯಗಳನ್ನು ಮತ್ತು ಉಚಿತವಾಗಿ ಪುಸ್ತಕ, ಉಡುಪುಗಳನ್ನು ಒದಗಿಸಿ ಕೊಡಲಾಗುತ್ತಿತ್ತು. ಶಾಲೆಗಳಗೆ ಕಳಸುವಂತೆ ಮನವೊಲಿಸುವುದಕ್ಕಾಗಿ ಅವರ ತಂದೆ ತಾಯಂದಿರಿಗೆ ಹಣಕಾಸಿನ ಸಹಾಯವನ್ನೂ ಮಾಡಲಾಗುತ್ತಿದ್ದಿತು. ಅವರಿಗೆ ಪರೀಕ್ಷಾ ಶುಲ್ಕವನ್ನು ಮನ್ನ ಮಾಡಲಾಗಿತ್ತು. ಇಂಗ್ಲೀಷ್ ಭಾಷೆಯನ್ನು ಕಲಿಸಲು ತಕ್ಕ ವ್ಯವಸ್ಥೆ ಮಾಡಿ ಶಾಲೆಗೆ ಸೇರಲು ಉಚಿತ ಅವಕಾಶವನ್ನು ಮಾಡಿಕೊಡಲಾಗಿದ್ದಿತು. ಇಷ್ಟು ಮಾತ್ರವಲ್ಲದೇ ವ್ಯವಸಾಯ ಮಾಡಲು ರಿಯಾಯಿತಿ ದರದಲ್ಲಿ ಭೂಮಿಯನ್ನು ಮಂಜೂರು ಮಾಡುವ ವ್ಯವಸ್ಥೆಯನ್ನು ಕಾನೂನಾತ್ಮಕವಾಗಿ ಜಾರಿಗೆ ತರಲಾಯಿತು. ಪ್ರತ್ಯೇಕ ಬಡಾವಣೆ ಹಾಗೂ ಸಹಕಾರ ಸಂಘ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಯಿತು. ಇದರೊಂದಿಗೆ ಸರ್ಕಾರಿ ಉದ್ಯೋಗಗಳಗೆ ವಿದ್ಯಾವಂತರಾಗಿದ್ದ ದಲಿತರನ್ನು ಆದ್ಯತೆಯ ಮೇರೆಗೆ ನೇಮಿಸಿಕೊಳ್ಳಲಾಗುತ್ತಿತ್ತು.

ಪುರಸಭೆ, ಜಿಲ್ಲಾಮಂಡಳ, ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿದಾಯ ಸಭೆಗಳಲ್ಲಿ ದಲಿತ ಸದಸ್ಯರಿಗೆ ವಿಶೇಷ ಸೌಕರ್ಯವನ್ನು ಮಾಡಿಕೊಡಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ, ದಲಿತರು ಸಾರ್ವಜನಿಕ ಮೂಲಗಳ (ಜಲಾಶಯಗಳ) ನೀರನ್ನು ಬಳಸುವ ಹಕ್ಕನ್ನು ಪಡೆದುಕೊಂಡರು. ಈ ಎಲ್ಲಾ ಕಾರಣಗಳಂದಾಗಿ ಸವರ್ಣೀಯರು ಪ್ರಭುತ್ವದ ವಿರುದ್ಧ ನಿಂತರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ದಲಿತರ ವಿಷಯದಲ್ಲಿ ಎಂತಹ ಕಾಳಜಿ ಇದ್ದಿತು ಎಂಬುದನ್ನು 1936ರ ಅಕ್ಟೋಬರ್ ತಿಂಗಳಲ್ಲಿ ನಡೆದ ಘಟನೆಯೊಂದು ದೃಢೀಕರಿಸುತ್ತದೆ. ಭಾರತದ ಚರಿತ್ರೆಯಲ್ಲಿಯೇ ಎಲ್ಲೂ ಕಂಡರಿಯದ ದಲಿತರ ಅಭೂತಪೂರ್ವವೆನ್ನಿಸಿದ ಒಂದು ಬದಲಾವಣೆಯನ್ನು ಅವರು ಜಾರಿಗೆ ತಂದರು. ಅದೆಂದರೆ, ಪ್ರಥಮ ಬಾರಿಗೆ ಅರಮನೆಯನ್ನು ಪ್ರವೇಶಿಸಲು ದಲಿತರಿಗೆ ಅವಕಾಶ ಕಲ್ಪಿಸಿದ್ದು, ಪ್ರಾಚೀನ ಕಾಲದಿಂದಲೂ ಅನುಸರಿಸಿಕೊಂಡು ಬರಲಾಗಿದ್ದ ಜಾತಿ ಪದ್ಧತಿಗಳ ವಿಷಯದಲ್ಲಿ ಇದೆಷ್ಟು ಅಮೋಘವಾದ ಮಾರ್ಪಾಡು ಎಂಬುದನ್ನು ಈ ಘಟನೆಯ ಪ್ರತ್ಯಕ್ಷದರ್ಶಿಯಾಗಿದ್ದವರು. ಹಾಗೂ ಪೂರ್ವ ಆಚರಣೆಗಳ ಒತ್ತಡ ಎಷ್ಟು ಕಟ್ಟುನಿಟ್ಟಿನದು, ಎಷ್ಟು ಕಠಿಣವಾದುದು ಎಂಬುದನ್ನು ಅರಿತವರು ಮಾತ್ರ ಪೂರ್ಣವಾಗಿ ಗ್ರಹಿಸಿ,

ನಿರ್ದಿಷ್ಟವಾಗಿ ಶ್ಲಾಘಿಸಬಲ್ಲರು. ಮೊದಲೇ ಹೇಳಿದ ಹಾಗೆ ದಲಿತರು ಸಹ ಅರಮನೆಯನ್ನು ಪ್ರವೇಶಿಸಬಹುದೆಂಬುದಾಗಿ ಹೇಳಿ ಅವರಂತೆ ಅವಕಾಶ ಮಾಡಿಕೊಟ್ಟ ಭಾರತದ ಸಂಸ್ಥಾನಾಧೀಶರುಗಳಲ್ಲಿಯೇ ನಾಲ್ವಡಿ ಅವರ ಮೊಟ್ಟ ಮೊದಲನೆಯವರು.

ಭಾರತದ ಇತರೆ ಸಂಸ್ಥಾನದ ದಲಿತ ಜನತೆಯು ಸ್ವಾತಂತ್ರ್ಯಾನಂತರ ಅವರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ನಿಯೋಜಿಸುವುದನ್ನು ಕಂಡರೆ; ಮೈಸೂರು ಸಂಸ್ಥಾನ ಅರಸರಾದ ನಾಲ್ವಡಿ ಅವರು ಅದಕ್ಕಿಂತ ನಲವತ್ತು ವರ್ಷಗಳ ಹಿಂದೆಯೇ ದಲಿತರ ಬದುಕಿನ ಉತ್ತಮೀಕರಣಕ್ಕಾಗಿ ಯೋಚಿಸಿ, ಯೋಜಿಸಿ ಕ್ರಮಕ್ಕೈಗೊಂಡಿದ್ದರು. ಮೊದಲೇ ಹೇಳಿದಂತೆ ಪಂಚಮರಿಗಾಗಿ ಮೊದಲು ಮೈಸೂರು ಮತ್ತು ನರಸಾಪುರಗಳಲ್ಲಿ ಎರಡು ಸರ್ಕಾರಿ ಶಾಲೆಗಳನ್ನು ತೆರೆಯಲಾಯಿತು. ಅನಂತರ ಮತ್ತೊಮ್ಮೆ ಕೋಲಾರ, ತುಮಕೂರು, ಚಿತ್ರದುರ್ಗಾ, ದಾವಣಗೆರೆ, ಮಂಡ್ಯ, ಮೈಸೂರು, ಆನೆಕಲ್ಲು ಹಾಗೂ ಹಾಸನಗಳಲ್ಲಿ ಅನುದಾನರಹಿತ ಶಾಲೆಗಳನ್ನು ಅಸ್ಪಶ್ಯರ ಶಿಕ್ಷಣಕ್ಕಾಗಿಯೇ ಆರಂಭಿಸಲಾಯಿತು. ಅಷ್ಟೇ ಅಲ್ಲದೆ ಮಿಕ್ಕೆಲ್ಲಾ ಸಾರ್ವಜನಿಕ ಶಾಲೆಗಳಿಗೂ ಸಹ ಯಾವುದೇ ಜಾತಿ ಧರ್ಮದ ಭೇದಭಾವವಿಲ್ಲದ ಪ್ರವೇಶ ಪಡೆಯುವ ಅವಕಾಶವನ್ನು ಕಲ್ಪಿಸಲಾಯಿತು. ನಾಲ್ವಡಿ ಅವರ ದೃಢ ನಿರ್ಧಾರದಿಂದ ಸೋಸಲೆ ಗ್ರಾಮದ ಬಿ.ರಾಚಪ್ಪ ಎಂಬುವವರು 1925ರಲ್ಲಿ ಮೈಸೂರು ಸಂಸ್ಥಾನದಲ್ಲಿಯೇ ಪ್ರಥಮವಾಗಿ ಬಿ.ಎ. ಪದವಿಯನ್ನು ಪಡೆದವರೆನಿಸಿಕೊಂಡರು. ಹಾಗೆಯೇ, 1942ರಲ್ಲಿ ಸೋಸಲೆ ಗ್ರಾಮದ ಎಸ್.ಎಂ.ಸಿದ್ದಯ್ಯ ಇವರು ಮಾಜಿ ಲೋಕಸಭಾ ಸದಸ್ಯರು ದ್ವಿತೀಯ ವ್ಯಕ್ತಿಯಾಗಿ ಬಿ.ಎಸ್ಸಿ. ಪದವಿ ಪಡೆದರು.

ಅಸ್ಪೃಶ್ಯರು ಹಾಗೂ ಹಿಂದುಳಿದ ವರ್ಗಗಳ ಮಕ್ಕಳು ತಮ್ಮ ಜೀವನಶೈಲಿಯನ್ನು ಮಾರ್ಪಾಡುಗೊಳಿಸಿಕೊಂಡು ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರುವಂತಾಗುವ ಘನ ಉದ್ದೇಶದಿಂದ ಮಹಾರಾಜರ ಸರ್ಕಾರವು 29ನೇ ನವೆಂಬರ್ 1918ರಲ್ಲಿ ಹೊರಡಿಸಿದ ಗೆಜೆಟ್ ಪ್ರಕಟಣೆಯ ಪಾಠ ಇದು. "ಜಾತಿಯ ಆಧಾರದ ಮೇಲೆ ಯಾರನ್ನೂ ಸಾರ್ವಜನಿಕ ಶಾಲೆಗಳಿಂದ ದೂರವಿಡುವ ಪರಿಪಾಠವನ್ನು ಸರ್ಕಾರವು ಎತ್ತಿಹಿಡಿಯಲಾರದು. ಸಾರ್ವಜನಿಕ ಶಾಲೆಗಳನ್ನು ಲೋಕಾದಾಯಗಳಿಂದ ನಡೆಸುತ್ತಿರುವುದರಿಂದ ಶಿಕ್ಷಣವೂ ಸಹ ಆಸ್ಪತ್ರೆ, ನ್ಯಾಯಾಲಯಗಳು, ರೈಲು ಪ್ರಯಾಣ ಇತ್ಯಾದಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಇರುವಂತೆಯೇ ರಾಜ್ಯದ ಎಲ್ಲ ವರ್ಗದ ಜನರಿಗೂ ಲಭ್ಯವಾಗಬೇಕು ಎಂದು ಉದ್ದೇಶಿಸಲಾಗಿದೆ" ಇದನ್ನು ಪ್ರಕಟಿಸಿರುವುದರ ಜೊತೆಗೆ ಕೂಡಲೆ ಅದೇ ವರ್ಷ ಈ ಘೋಷಣೆಯ ಆಧಾರದ ಮೇಲೆ ಪಂಚಮ ವರ್ಗದ ಹಾಗೂ ಇತರೆ ಹಿಂದುಳಿದ ಎಲ್ಲ ವರ್ಗದ ಮಕ್ಕಳನ್ನು ಸಾರ್ವಜನಿಕ ಶಾಲೆಗಳಿಗೆ ನಿರಾತಂಕವಾಗಿ ಸೇರಿಸಿಕೊಳ್ಳಬೇಕು ಎಂಬ ಆಜ್ಞೆಯನ್ನು ಜಾರಿಗೆ ತರಲಾಯಿತು. ಇದರಿಂದಾಗಿ ಸಂಸ್ಥಾನದಲ್ಲಿದ್ದ ದಲಿತರ ಸಾಮಾಜಿಕ ಸ್ಥಾನಮಾನವು ಅಂದಿನಿಂದಲೇ ಬದಲಾವಣೆಯ ಹಾದಿಯನ್ನು ಹಿಡಿಯಿತು. 1919-20ರಲ್ಲಿ 3144 ಪಂಚಮ ವರ್ಗದ 1

ಹೊಲೆಯ ಮಾದಿಗರು, ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗುತ್ತಿದ್ದರು. ಇದಲ್ಲದೆ ಪಂಚಮ ವರ್ಗದ ವಿದ್ಯಾರ್ಥಿ ವೇತನಕ್ಕಾಗಿಯೇ ಪ್ರತ್ಯೇಕ 15 ಸಾವಿರ ರೂಪಾಯಿಗಳ ವಾರ್ಷಿಕ ಅನುದಾನವನ್ನು ಸಹ ಸರ್ಕಾರ ಮಂಜೂರು ಮಾಡಿತು. ಇತರೆ ಹಿಂದುಳಿದ ವರ್ಗದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನಗಳನ್ನು ಸಹ ಸೃಷ್ಟಿಮಾಡಲಾಯಿತು. ಒಟ್ಟಿನಲ್ಲಿ ಅವರು ಅಂದು ತೆಗೆದುಕೊಂಡ ಈ ದೃಢ ಸಂಕಲ್ಪದಿಂದ ಹಾಗೂ ನಿಷ್ಠಾವಂತ ಅಧಿಕಾರಿಗಳ ಪರಿಶ್ರಮದಿಂದ ಅಸ್ಪೃಶ್ಯ ವರ್ಗ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಜೊತೆಗೆ ಬೌದ್ಧಿಕವಾಗಿ ಅಭಿವೃದ್ಧಿ ಕಾಣಲು ಸಾಧ್ಯವಾಯಿತು. ಇದರ ಫಲವಾಗಿಯೇ ಉತ್ತರ ಕರ್ನಾಟಕ ದಲಿತರಿಗೆ ಹೋಲಿಸಿದರೆ ಮೈಸೂರು ಸಂಸ್ಥಾನದ ದಲಿತರು ಸಾಮಾಜಿಕವಾಗಿ ಶೈಕ್ಷಣಿಕವಾಗಿ, ಬೌದ್ಧಿಕವಾಗಿ ಪ್ರಗತಿಯಲ್ಲಿರಲು ಸಾಧ್ಯವಾಯಿತು.

ಈ ಎಲ್ಲಾ ಬೆಳವಣಿಗೆಯಿಂದಾಗಿಯೇ ಭಾರತದ ಸ್ವಾತಂತ್ರ್ಯ ಚಳವಳಿಯ ಸೇನಾನಿ ಗಾಂಧೀಜಿ ಅವರು ಮೈಸೂರನ್ನು ರಾಮರಾಜ್ಯವೆಂದೂ ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜರ್ಷಿಯೆಂದೂ ಕರೆದರು. ಇವರ ಅವಧಿಯಲ್ಲಿ ದಲಿತರು ಹೊಸ ಬಗೆಯ ಶಿಕ್ಷಣ ಮತ್ತು ಸಾಮಾನ್ಯ ಉದ್ಯೋಗ ಅವಕಾಶಗಳಿಗೆ ಸಂಘಟಿತರಾದರು. ಮಹಿಳೆಯರು ಮತ್ತು ವಿದ್ಯಾವಂತ ಯುವಕರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಧ್ವನಿ ಎತ್ತಿದರು. ಜಾತಿ ಪದ್ಧತಿ ಅಸ್ಪೃಶ್ಯತೆ ಇನ್ನಿತರ ಸಾಮಾಜಿಕ ಅನಿಷ್ಟಗಳು ಮತ್ತು ಮೂಢನಂಬಿಕೆಗಳು ವಿಮರ್ಶೆಗೊಳಪಟ್ಟವು. ನಾಲ್ವಡಿ ಅವರು ಈ ಹೊಸ ಬೆಳವಣಿಗೆಗೆ ವೈಜ್ಞಾನಿಕವಾದ ಹಾಗೂ ಸಮತೋಲನವಾದ ನಿಲುವನ್ನು ಹೊಂದಿದ್ದುದರಿಂದ ಸಮಾಜ ಎಲ್ಲಾ ಕ್ಷೇತ್ರಗಳಲ್ಲೂ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಲು ಸಾಧ್ಯವಾಯಿತು. ಪರಿಣಾಮವಾಗಿ ಮೈಸೂರು ಸಂಸ್ಥಾನ ಭರತಖಂಡದಲ್ಲಿಯೇ ಒಂದರ್ಥದಲ್ಲಿ ಮಾದರಿ ಸಂಸ್ಥಾನವಾಗಿ ರೂಪುಗೊಂಡಿತು.

**ಪರಾಮರ್ಶಿಸಿದ ಗ್ರಂಥಗಳು**

1. ಡಾ.ಎನ್.ಚಿನ್ನಸ್ವಾಮಿ ಸೋಸಲೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018
2. ಡಾ.ಸಿ.ಎ. ಶ್ರೀಧರ, ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಸ್ಕೃತಿ, ಸಂಸ್ಕೃತಿ ಬುಕ್ ಪ್ಯಾರಡೈಸ್, ಮೈಸೂರು, 2010
3. ತಿರುಮಲೆ ತಾತಾಚಾರ್ಯಶರ್ಮ, ಮೈಸೂರು ಇತಿಹಾಸದ ಹಳೆಯ ಪುಟಗಳು, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು, 2006
4. ಡಾ.ಆರ್.ಗೋಪಾಲ್, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010
5. ಡಾ.ಎಸ್.ಚಿನ್ನಸ್ವಾಮಿ,ಸೋಸಲೆ–ಅಂಬೇಡ್ಕರ್‌ವಾದ ಮತ್ತು ದಲಿತರು, ಸ್ವಪ್ನ ಬುಕ್‌ಹೌಸ್, ಬೆಂಗಳೂರು, 2012